ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 644
2. ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೆ ಗೌಡ
3. ಉತ್ತರಿಸಬೇಕಾದ ದಿನಾಂಕ : 22.02.2022.
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಾಸನಪುರಕ್ಕೆ ಎ.ಪಿ.ಎಂ.ಸಿ ಸ್ಥಳಾಂತರಗೊಂಡಿದ್ದು, ಅಲ್ಲಿ ವ್ಯಾಪಾರ ವಹಿವಾಟು ಸರಿಯಾಗಿ ನಡಿಯದೆ ವರ್ತಕರಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪನ್ನಗಳ ವ್ಯಾಪಾರ ವಹಿವಾಟು ಕೈಗೊಳ್ಳಲು ದಾಸನಪುರ ಹೋಬಳಿಯಲ್ಲಿ ಪ್ರತ್ಯೇಕ ಮಾರುಕಟ್ಟೆ ನಿರ್ಮಿಸಲು ತೀರ್ಮಾನ ಕೈಗೊಂಡು ಅದರಂತೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 6(2) ರಡಿ ದಿನಾಂಕ:07.10.2009 ರಂದು ದಾಸನಪುರ ಉಪ ಮಾರುಕಟ್ಟೆ ಹಾಗೂ ಉಪ ಮಾರುಕಟ್ಟೆ ಪ್ರಾಂಗಣವೆಂದು ಅಧಿಸೂಚನೆ ಮೂಲಕ ಘೋಷಿಸಲಾಗಿದೆ. ನಂತರದ ಬೆಳವಣಿಗೆಯಲ್ಲಿ ದಿನಾಂಕ:28.09.2013ರಲ್ಲಿ 89 ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣಕ್ಕೊಳಪಡಿಸಿ ಘೋಷಿಸಲಾಗಿದೆ. ವ್ಯಾಪಾರ ವಹಿವಾಟು ಹೊಸದಾಗಿ ಅಭಿವೃದ್ಧಿಪಡಿಸುವ ಹಾಗೂ ವರ್ತಕರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಉಪ ಮಾರುಕಟ್ಟೆ ಪ್ರಾಂಗಣದ ಎ ಮತ್ತು ಬಿ ಬ್ಲಾಕ್‌ಗಳಲ್ಲಿ ನಿರ್ಮಿಸಿರುವ ಅಂಗಡಿ-ವ-ಗೋದಾಮುಗಳ ನಿಗಧಿತ ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಶೇ.50 ರಷ್ಟು ಕಡಿಮೆಗೊಳಿಸಿ ದಿನಾಂಕ:29.12.2016 ಹಾಗೂ ದಿನಾಂಕ:03.08.2018 ರಂದು ಜೇಷ್ಠತೆ ಆಧಾರದ ಮೇಲೆ ಒಟ್ಟು 167 ಮಳಿಗೆಗಳನ್ನು ಹಾಗೂ ಉಳಿದ 45 ಮಳಿಗೆಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿವಿಧ ದಿನಾಂಕಗಳಂದು ವರ್ತಕರಿಗೆ ಹಂಚಿಕೆ ಮಾಡಲಾಗಿದೆ. ದಿನಾಂಕ:15.01.2018 ರಂದು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಅಂಗಡಿ/ಮಳಿಗೆ ಹಂಚಿಕೆ ಪಡೆದಿರುವ ವರ್ತಕರು ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ಹಾಗೂ ಧವಸಧಾನ್ಯ ವ್ಯಾಪಾರ ವಹಿವಾಟನ್ನು ಪ್ರಾರಂಭಿಸಿರುತ್ತಾರೆ. ಹಾಗಾಗಿ ವರ್ತಕರಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ)	ಸದರಿ ದಾಸನಪುರ ಎ.ಪಿ.ಎಂ.ಸಿ ಎ,ಬಿ ಬ್ಲಾಕಿನಲ್ಲಿ 212 ಅಂಗಡಿಗಳು ತೆರೆದಿದ್ದು, ಇವುಗಳಲ್ಲಿ ಹಲವು ಅಂಗಡಿಗಳಲ್ಲಿ ವ್ಯಾಪಾರ ವಹಿವಾಟು ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ ಮತ್ತು ಬಿ ಬ್ಲಾಕಿನಲ್ಲಿ ಲೈಸೆನ್ಸ್ ಪಡೆದ ಅರ್ಹ ಪೇಟೆ ಕಾರ್ಯಕರ್ತರಿಗೆ ಮಳಿಗೆಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಪೇಟೆ ಕಾರ್ಯಕರ್ತರು ವ್ಯಾಪಾರ ವಹಿವಾಟು ಕೈಗೊಂಡಿರುತ್ತಾರೆ. ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಒಟ್ಟು 309 ದಲ್ಲಾಲರು/ವರ್ತಕರು ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಒಟ್ಟು 315 ದಲ್ಲಾಲರು/ವರ್ತಕರು ಲೈಸೆನ್ಸ್ ಪಡೆದು ಈರುಳ್ಳಿ ಮತ್ತು ಆಲೂಗಡ್ಡೆ ವ್ಯಾಪಾರ ವಹಿವಾಟು ನಡೆಸುತ್ತಿರುತ್ತಾರೆ. ಕೋವಿಡ್-19ರ ಮೊದಲನೇ ಅಲೆ ವ್ಯಾಪಕವಾಗಿ ಹರಡುವುದನ್ನು ತಡೆಗಟ್ಟುವ ದೃಷ್ಟಿಯಿಂದ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುತ್ತಿದ್ದ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಮತ್ತು ಆಲೂಗಡ್ಡೆ ವಹಿವಾಟನ್ನು ದಿನಾಂಕ:30.03.2020 ರಿಂದ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಸಲು ಕ್ರಮ ವಹಿಸಲಾಗಿರುತ್ತದೆ.

...2

		ತದನಂತರ ದಿನಾಂಕ:10.06.2020ರ ಆದೇಶದ ಮೇರೆಗೆ ದಾಸನಪುರ ಉಪ ಮಾರುಕಟ್ಟೆಯಲ್ಲಿ ಲೈಸೆನ್ಸ್ ಹೊಂದಿ ಮಳಿಗೆ ಹೊಂದಿರುವವರು ಹಾಗೂ ಯಶವಂತಪುರ ಪ್ರಾಂಗಣದಲ್ಲಿ ಲೈಸೆನ್ಸ್ ಹಾಗೂ ಮಳಿಗೆ ಹೊಂದಿರುವವರು ಆಯಾ ಪ್ರಾಂಗಣಗಳಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಮತ್ತು ಆಲೂಗಡ್ಡೆ ವ್ಯವಹಾರ ಮಾಡಲು ಅನುಮತಿಸಲಾಗಿರುತ್ತದೆ. 2018-19ನೇ ಸಾಲಿನಲ್ಲಿ ಒತ್ತಾಯ ಪೂರ್ವಕವಾಗಿ ಎಲ್ಲಾ ಈರುಳ್ಳಿ ಆಲೂಗಡ್ಡೆ ವರ್ತಕರನ್ನು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ಕೈಗೊಳ್ಳಲು ಸ್ಥಳಾಂತರಿಸಲಾಗಿತ್ತು. ತದನಂತರದಲ್ಲಿ 2019-20ರ ಅವಧಿಯಲ್ಲಿ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೈಸೆನ್ಸ್ ಹಾಗೂ ಮಳಿಗೆ ಹೊಂದಿದ್ದ ವ್ಯಾಪಾರಸ್ಥರು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯವಹಾರ ನಡೆಸಿರುತ್ತಾರೆ. 2020-21ನೇ ಸಾಲಿನಲ್ಲಿ ಮಾರುಕಟ್ಟೆಗೆ ಆವಕ ಕಡಿಮೆ ಇದ್ದು, ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆಯಾ ಮಾರುಕಟ್ಟೆ ಪ್ರಾಂಗಣದ ವರ್ತಕರಿಗೆ ಅನುಗುಣವಾಗಿ ವಹಿವಾಟು ನಡೆದಿರುತ್ತದೆ. ಈ ಅವಧಿಯಲ್ಲಿ ಮೇ ಹಾಗೂ ಜೂನ್ 2020 ತಿಂಗಳುಗಳಲ್ಲಿ ಹಣ್ಣು, ಹೂವು ಮತ್ತು ತರಕಾರಿ ಉತ್ಪನ್ನಗಳ ಮೇಲೆ ವಿಧಿಸುತ್ತಿದ್ದ ಬಳಕೆದಾರರ ಶುಲ್ಕಕ್ಕೆ ವಿನಾಯಿತಿ ನೀಡಲಾಗಿರುತ್ತದೆ. ಪ್ರಸ್ತುತ 2021-22ನೇ ಸಾಲಿಗೆ ಎರಡೂ ಪ್ರಾಂಗಣಗಳಲ್ಲಿ ವ್ಯಾಪಾರ ವಹಿವಾಟು ನಡೆದಿದ್ದು, ಈ ಮಧ್ಯೆ ಕೋವಿಡ್-2ನೇ ಅಲೆ ಹರಡುವಿಕೆಯನ್ನು ತಡೆಗಟ್ಟುವ ಸಂಬಂಧ ವಿಸ್ತಾರವಾದ ಆಟದ ಮೈದಾನ/ಬಯಲು ಪ್ರದೇಶಗಳಲ್ಲಿ ಹಣ್ಣು, ತರಕಾರಿ, ದಿನಸಿ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಕಲ್ಪಿಸುವಂತೆ ಮಾರ್ಗಸೂಚಿ ಹೊರಡಿಸಿದ್ದು, ಇದರ ಮೇರೆಗೆ ದಿನಾಂಕ:23.04.2021 ರಿಂದ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುತ್ತಿದ್ದ, ಈರುಳ್ಳಿ ಆಲೂಗಡ್ಡೆ, ಬೆಳ್ಳುಳ್ಳಿ ವಹಿವಾಟನ್ನು ಸ್ಥಗಿತಗೊಳಿಸಿ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಗೊಳಿಸಲಾಗಿರುತ್ತದೆ. ತದನಂತರ ದಿನಾಂಕ:03.09.2021 ರಂದು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಲೈಸೆನ್ಸ್ ಪಡೆದಿರುವ ದಲ್ಲಾಲರು/ವರ್ತಕರು ಹಾಗೂ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಲೈಸೆನ್ಸ್ ಪಡೆದಿರುವ ದಲ್ಲಾಲರು/ವರ್ತಕರು ಆಯಾ ಪ್ರಾಂಗಣಗಳಲ್ಲಿಯೇ ವ್ಯಾಪಾರ ವಹಿವಾಟು ನಡೆಸಲು ಅವಕಾಶಿಸಲಾಗಿರುತ್ತದೆ.

<table>
<tr><td></td><td></td><td>ಈ ಎರಡೂ ಮಾರುಕಟ್ಟೆ ಪ್ರಾಂಗಣಗಳ ಕಳೆದ 04 ಸಾಲುಗಳಲ್ಲಿ ಸಮಿತಿಗೆ ಜಮೆಯಾದ ಬಳಕೆದಾರರ ಶುಲ್ಕದ ವಿವರಗಳನ್ನು ಈ ಕೆಳಗಿನಂತಿದೆ.
<table>
<tr><th>ವರ್ಷ</th><th>(ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ) ಬಳಕೆದಾರರ ಶುಲ್ಕದ ಮೊತ್ತ (ರೂ.ಕೋಟಿಗಳಲ್ಲಿ)</th><th>(ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣ) ಬಳಕೆದಾರರ ಶುಲ್ಕದ ಮೊತ್ತ (ರೂ.ಕೋಟಿಗಳಲ್ಲಿ)</th></tr>
<tr><td>2018-19</td><td colspan="2">12.92 (ಪ್ರತ್ಯೇಕಿಸಿರುವುದಿಲ್ಲ)</td></tr>
<tr><td>2019-20</td><td>19.77</td><td>1.11</td></tr>
<tr><td>2020-21</td><td>6.57</td><td>2.00</td></tr>
<tr><td>2021-22 (ಜನವರಿ-2022ರ ಅಂತ್ಯದವರೆಗೆ)</td><td>3.97</td><td>3.36</td></tr>
</table>
ಅಂಗಡಿಗಳಲ್ಲಿ ವ್ಯಾಪಾರ ವಹಿವಾಟು ನಡೆಸದಿರುವ ಬಗ್ಗೆ ಸರ್ಕಾರಕ್ಕೆ ವರದಿಯಾಗಿಲ್ಲ.</td></tr>
<tr><td>ಇ)</td><td>ದಾಸನಪುರ ಎ.ಪಿ.ಎಂ.ಸಿ ಸ್ಥಳಾಂತರಗೊಂಡಿದ್ದರೂ, ಈರುಳ್ಳಿ/ ಆಲೂಗಡ್ಡೆ/ಬೆಳ್ಳುಳ್ಳಿ/ಶುಂಠಿ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ಯಶವಂತಪುರದ ಎ.ಪಿ.ಎಂ.ಸಿಯಲ್ಲಿ ನಡೆಸಲು ಅವಕಾಶ ಕಲ್ಪಿಸಿರುವುದರಿಂದ ದಾಸನಪುರದ ವರ್ತಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದ ಎ ಮತ್ತು ಬಿ ಬ್ಲಾಕ್ ಗಳಲ್ಲಿ ದಿನಾಂಕ:28.09.2013 ರಿಂದಲೇ 89 ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ಮತ್ತು ಶುಂಠಿ ಉತ್ಪನ್ನಗಳನ್ನು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣ ಹಾಗೂ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯವಹಾರ ನಡೆಸಲು ಆಯಾ ಪ್ರಾಂಗಣಗಳಲ್ಲಿ ಲೈಸೆನ್ಸ್ ಹೊಂದಿರುವ ಪೇಟೆ ಕಾರ್ಯಕರ್ತರಿಗೆ ಅವಕಾಶ ಇರುತ್ತದೆ. ಇದರನುಸಾರ ಎರಡೂ ಪ್ರಾಂಗಣಗಳಲ್ಲಿ ಸದರಿ ಉತ್ಪನ್ನಗಳ ವ್ಯಾಪಾರ ವಹಿವಾಟು ನಡೆಯುತ್ತಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ದಾಸನಪುರ ವರ್ತಕರಿಗೆ ತೊಂದರೆ ಉಂಟಾಗಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿಲ್ಲ.</td></tr>
<tr><td>ಈ)</td><td>ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ದಾಸನಪುರದ ಎ.ಪಿ.ಎಂ.ಸಿ. ಯಲ್ಲಿನ ವರ್ತಕರು ಆರ್ಥಿಕ ಸಂಕಷ್ಟದಲ್ಲಿದ್ದು, ಇವರ ಬಾಡಿಗೆಯನ್ನು ಮನ್ನಾ ಮಾಡುವಲ್ಲಿ ಸರ್ಕಾರ ಕ್ರಮಕೈಗೊಳ್ಳುವುದೇ?</td><td>ಕೋವಿಡ್-19ರ ಮೊದಲನೇ ಹಾಗೂ ಎರಡನೇ ಅಲೆ ಸಂದರ್ಭದಲ್ಲಿ, ಸರ್ಕಾರದ ನಿರ್ದೇಶದನುಸಾರ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುತ್ತಿದ್ದ ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ಮತ್ತು ಶುಂಠಿ ವ್ಯಾಪಾರ ವಹಿವಾಟನ್ನು ನಿರ್ಬಂಧಿಸಿ ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ನಡೆಸಲು ಕ್ರಮ ವಹಿಸಲಾಗಿರುತ್ತದೆ. ಈ ಅವಧಿಯಲ್ಲಿ ಯಶವಂತಪುರ ಮಾರುಕಟ್ಟೆ ಪ್ರಾಂಗಣದ ವ್ಯಾಪಾರ ವಹಿವಾಟನ್ನು ದಾಸನಪುರ ಮಾರುಕಟ್ಟೆಗೆ ಸ್ಥಳಾಂತರಗಳಿಸಿ, ವಹಿವಾಟು ಸುಗಮವಾಗಿ ನಡೆದಿರುತ್ತದೆ.

ಅಲ್ಲದೇ, ಬಳಕೆದಾರರ ಶುಲ್ಕವನ್ನು ಶೇ.1 ರಿಂದ ಶೇ. 0.60ಕ್ಕೆ ಮರು ಹಂಚಿಕೆ ಮಾಡಿ ನಿಗಧಿಪಡಿಸಲಾಗಿದ್ದು, ಇದರಿಂದಾಗಿ ವರ್ತಕರಿಗೆ ಅನುಕೂಲವಾಗಿರುತ್ತದೆ.

ಮಾರುಕಟ್ಟೆ ಸಮಿತಿಗಳ ಆದಾಯಗಳಲ್ಲಿ ಲೀವ್ ಅಂಡ್ ಲೈಸೆನ್ಸ್ ಶುಲ್ಕ ಮುಖ್ಯ ಆದಾಯವಾಗಿದ್ದು, ಮಾರುಕಟ್ಟೆ ಪ್ರಾಂಗಣಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಮನ್ನಾ ಮಾಡಲು ಅವಕಾಶವಿರುವುದಿಲ್ಲ.</td></tr>
</table>

ಸಂಖ್ಯೆ: ಸಿಒ 40 ಎಂಆರ್‌ಇ 2022

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು